ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 18-4-1995

ನಂ:ಸಿಆಸುಇ 4 ಶಿಅಅ 95

## ಸುತ್ತೋಲೆ

ವಿಷಯ:- ಅತಿಗಣ್ಯ ವ್ಯಕ್ತಿಗಳ : ಗಣ್ಯವ್ಯಕ್ತಿಗಳ ರಕ್ಷಣಾ ಕರ್ತವ್ಯಕ್ಕಾಗಿ ನಿಯೋಜಿಸಿದ ಏರ್‌ಕ್ರಾಫ್ಟ್ : ಗ್ರಾಂಡ್‌ಕ್ರಾಫ್ಟ್ ಸಿಬ್ಬಂದಿಗಳಿಗೆ ವಸತಿ ಊಟೋಪಚಾರ ಹಾಗೂ ಸಾರಿಗೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

ಉಲ್ಲೇಖ:- ಪತ್ರ ಸಂ.ಏರ್‌ಹೆಚ್‌ಕ್ಯೂ:25654:ಅಕೌಂಟ್ಸ್ ದಿನಾಂಕ 13-7-92ರಂದು ಏರ್‌ವೈಸ್ ಮಾರ್ಷಲ್ ಡೈರೆಕ್ಟರ್ ಆಫ್ ಅಕೌಂಟ್ಸ್, ಎಲ್.ಹೆಚ್.ಕ್ವಾರ್ಟರ್ಸ್, ರಾಮಕೃಷ್ಣಪುರಂ ನವದೆಹಲಿ — 66 ರವರ ಪತ್ರದ ಮೇರೆಗೆ.

---

ರಾಜ್ಯಕ್ಕೆ ಆಗಮಿಸುವ ಅತಿಗಣ್ಯ ವ್ಯಕ್ತಿಗಳ : ಗಣ್ಯವ್ಯಕ್ತಿಗಳ ರಕ್ಷಣಾ ಕರ್ತವ್ಯಕ್ಕಾಗಿ ಕೇಂದ್ರದಿಂದ ಆಗಮಿಸುವ ಏರ್‌ಕ್ರಾಫ್ಟ್ : ಗ್ರಾಂಡ್‌ಕ್ರಾಫ್ಟ್ ಗಳಿಗೆ ಒದಗಿಸುವ ಸೌಲಭ್ಯಗಳಿಗೆ ತಗಲುವ ವೆಚ್ಚವನ್ನು ರಾಜ್ಯ ಅತಿಥೇಯ ಸಂಸ್ಥೆಯು ತಾತ್ಕಾಲಿಕವಾಗಿ ಸಂಬಂಧಪಟ್ಟವರಿಗೆ ಪಾವತಿಸಿ ನಂತರ ಅದರ ಮರು ಪಾವತಿಗಾಗಿ ವಾಯುಸೇನಾ ಮಂತ್ರಾಲಯಕ್ಕೆ ಬಿಲ್ಲುಗಳನ್ನು ಕಳುಹಿಸಬೇಕಾಗುತ್ತದೆ. ಹೀಗೆ ಕಳುಹಿಸುವಾಗ ಅದಕ್ಕೆ ಸಂಬಂಧಿಸಿದ ವಿವರಗಳನ್ನು ಸಹ ಬಿಲ್ಲುಗಳೊಂದಿಗೆ ಕಳುಹಿಸಬೇಕಾಗಿದ್ದು, ಇದನ್ನು ಈ ಕೆಳಕಂಡ ಪ್ಯಾರಾಗಳಲ್ಲಿರುವಂತೆ ವಿವರಿಸಲಾಗಿದ್ದು, ಇದರನ್ವಯ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಬಿಲ್ಲುಗಳನ್ನು ಸರ್ಕಾರಕ್ಕೆ ಕಳುಹಿಸಬೇಕಾದಾಗ ಈ ಕೆಳಕಂಡ ಅಂಶಗಳ ಬಗ್ಗೆ ಗಮನದಲ್ಲಿಟ್ಟುಕೊಳ್ಳಲು ಸೂಚಿಸಲಾಗಿದೆ.

(ಅ) ರಾಜ್ಯಕ್ಕೆ ಆಗಮಿಸುವ ಗಣ್ಯವ್ಯಕ್ತಿಗಳ ಭೇಟಿಯ ಅವಧಿಯು ಮುಗಿದ ತಕ್ಷಣ ಸಂಬಂಧಿಸಿದ ಬಿಲ್ಲುಗಳನ್ನು ಆದಷ್ಟು ಶೀಘ್ರವಾಗಿ ಕೇಂದ್ರ ವಾಯು ಸೇನಾ ಮಂತ್ರಾಲಯದಿಂದ ಮರುಪಾವತಿ ಪಡೆಯುವ ಸಲುವಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(ಆ) ಮುಂದುವರೆದು, ರಕ್ಷಣಾ ಕರ್ತವ್ಯಕ್ಕಾಗಿ ಆಗಮಿಸುವ ಏರ್‌ಕ್ರಾಫ್ಟ್ : ಗ್ರಾಂಡ್ ಕ್ರಾಫ್ಟ್ ಸಿಬ್ಬಂದಿಗಳ ವಾಸ್ತವ್ಯ ಹಾಗೂ ಊಟೋಪಚಾರಕ್ಕೆ ಸಂಬಂಧಪಟ್ಟಂತೆ ಅವರುಗಳಿಂದ ತಮ್ಮ ಹೆಸರು ಹುದ್ದೆ ಹಾಗೂ ವಿಳಾಸಗಳನ್ನೊಳಗೊಂಡ ಎಂ.ಟಿ. ಪ್ರೊಫಾರ್ಮ ಗಳನ್ನು ಪಡೆದುಕೊಂಡು ಅದನ್ನು ಸಂಬಂಧಪಟ್ಟ ಬಿಲ್ಲುಗಳೊಂದಿಗೆ ತಪ್ಪದೇ ಕಳುಹಿಸಲು ಸೂಚಿಸಲಾಗಿದೆ. ಎಂ.ಟಿ.ಪ್ರೊಫಾರ್ಮಗಳಿಲ್ಲದೆ ಏರ್ ಹೆಚ್ ಕ್ವಾರ್ಟರ್ಸ್ ರವರು ರಾಜ್ಯ ಸರ್ಕಾರ ಭರಿಸಿದ ವೆಚ್ಚವನ್ನು ಮರುಪಾವತಿ ಮಾಡುವುದಿಲ್ಲವಾದ್ದರಿಂದ ಈ ಬಗ್ಗೆ ಗಮನಹರಿಸಿ, ಸದರಿ ಸಿಬ್ಬಂದಿಗಳಿಂದ ಎಂ.ಟಿ.ಪ್ರೊಫಾರ್ಮಗಳನ್ನು ಪಡೆದು ಬಿಲ್ಲಿನೊಂದಿಗೆ ಲಗತ್ತಿಸಿ ಕಳುಹಿಸಲು ಕಟ್ಟುನಿಟ್ಟಾಗಿ ಸೂಚಿಸಿದೆ. ಇಲ್ಲದಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಬಿಲ್ಲುಗಳನ್ನು ಸರ್ಕಾರ ಅಂಗೀಕರಿಸುವುದಿಲ್ಲವೆಂದು ಸಹ ಸ್ಪಷ್ಟಪಡಿಸಲಾಗಿದೆ.

(ಇ) ಸದರಿ ಸಿಬ್ಬಂದಿಗಳಿಗೆ ಒದಗಿಸುವ ವಸತಿ ಊಟೋಪಚಾರ ಹಾಗೂ ಸಾರಿಗೆ ವ್ಯವಸ್ಥೆಗಳನ್ನು ಹೊರತುಪಡಿಸಿ, ಇನ್ನಾವುದೇ ಸೌಲಭ್ಯಗಳನ್ನು ಒದಗಿಸಬಾರದೆಂದು ಹಾಗೊಂದು ವೇಳೆ ಒದಗಿಸಿದರೆ ಸಂಬಂಧಪಟ್ಟವರಿಂದ ವಸೂಲಿ ಮಾಡತಕ್ಕದ್ದೆಂದು ತಿಳಿಸಲಾಗಿದೆ.

(ಈ) ಮುಂದುವರೆದು ಒಮ್ಮೆ ಬಿಲ್ಲುಗಳನ್ನು ಸರ್ಕಾರಕ್ಕೆ ಕಳುಹಿಸಿದ ನಂತರ ಮತ್ತೊಮ್ಮೆ ಅದೇ ಭೇಟಿಗೆ ಸಂಬಂಧಿಸಿದಂತೆ ಉಪ ಬಿಲ್ಲುಗಳನ್ನು ಕಳುಹಿಸಬಾರದೆಂದು ಸೂಚಿಸಿದೆ.

ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಸೂಚಿಸಲಾಗಿದೆ;

ಸಹಿ: (ಎನ್.ರಾಮಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ—1,
ಸಿ.ಆ.ಸು.ಇಲಾಖೆ (ರಾ.ಶಿ)

---

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಹಾಸನ ಜಿಲ್ಲೆ, ಹಾಸನ: ದಿನಾಂಕ: 12-8-1996

ನಂಬರ್: ಪ್ರೋ.37:96-97

ನಕಲನ್ನು ಜಿಲ್ಲೆಯ ಉಪ ವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರರವರಿಗೆ ಸೂಕ್ತ ತಿಳುವಳಿಕೆಗಾಗಿ ಕಳುಹಿಸಿದೆ.